# ವಾರ್ಷಿಕ ಪರೀಕ್ಷೆ–ಮಾದರಿ 2

## 10 ನೇಯತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 × 1 = 6**

1. ಅನುಸ್ವಾರ ಮತ್ತು ವಿಸರ್ಗಗಳು ಈ ಗುಂಪಿಗೆ ಸೇರುತ್ತವೆ.

ಅ) ಸ್ವರಗಳು ಆ) ಯೋಗವಾಹಗಳು ಇ) ವ್ಯಂಜನಗಳು ಈ) ಸಂಧ್ಯಾಕ್ಷರಗಳು

2. ಹೊಸಗಾಲ–ಪದವು ಈ ಸಂಧಿಗೆಉದಾಹರಣೆಯಾಗಿದೆ.

ಅ) ಗುಣಸಂಧಿ ಆ) ಆಗಮ ಸಂಧಿ ಇ) ಆದೇಶಸಂಧಿ ಈ) ಲೋಪಸಂಧಿ

3. ಒಂದು ಪದವನ್ನುಅಥವಾ ವಾಕ್ಯವನ್ನು ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ, ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ

ಅ) ಭಾವಸೂಚಕ ಆ) ಉದ್ಧರಣ ಇ) ಪ್ರಶ್ನಾರ್ಥಕ ಈ) ಆವರಣ

4. ನೆಯ್ದುವಸ್ತ್ರ–ಪದವು ಈ ಸಮಾಸಕ್ಕೆಉದಾಹರಣೆಯಾಗಿದೆ.

ಅ) ಗಮಕ ಆ) ಅಂಶಿ ಇ) ತತ್ಪುರುಷ ಈ) ಕರ್ಮಧಾರಯ

5. ಹಳಗನ್ನಡದ ಪಂಚಮೀ ವಿಭಕ್ತಿ ಪ್ರತ್ಯಯ

ಅ) ಒಳ್ ಆ) ಇಂದಂ ಇ) ಅತ್ತಣಿಂ ಈ) ಅ

6. ನೋಡು– ಧಾತುವಿನ ಸಂಭಾವನಾರ್ಥಕರೂಪವಿದು.

ಅ) ನೋಡಲಿ ಆ) ನೋಡಿಯಾನು ಇ) ನೋಡನು ಈ) ನೋಡುವನು

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ.** **4× 1 = 4**

7. ಈಗೀಗ : ದ್ವಿರುಕ್ತಿ : : ಕೆನೆಮೊಸರು: ____________

8. ದೃಷ್ಟಿ : ದಿಟ್ಟಿ : : ಪ್ರಸಾದ : ____________

9. ಇನತನುಜ : ಕರ್ಣ : : ಅಂತಕಾತ್ಮಜ: ____________

10. ಚೆನ್ನಾಗಿ : ಸಾಮಾನ್ಯಾವ್ಯಯ : ಹೌದು : ____________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿಉತ್ತರ ಬರೆಯಿರಿ.** **7 × 1 = 7**

11. ಗಡಿ ಪ್ರದೇಶದಲ್ಲಿ ಬ್ಲಾಕ್‌ಔಟ್ ನಿಯಮವನ್ನುಏತಕ್ಕಾಗಿ ಪಾಲಿಸಲಾಗುತ್ತದೆ?
12. ನಾಲ್ವಡಿಕೃಷ್ಣರಾಜಒಡೆಯರ್‌ಯಾವಾಗ ಪಟ್ಟಾಭಿಷಿಕ್ತರಾದರು?
13. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?
14. ಕುಲಾಲಚಕ್ರಎಂದರೇನು?
15. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
16. ಹಲಗಲಿ ಎಲ್ಲಿದೆ?
17. ಪುಟ್ಟ ಪೋರಿಯು ಏನು ಮಾಡುತ್ತಿದ್ದಾಳೆ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 × 2 = 20**

18. ಮುದುಕಿಯುರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
19. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
20. ಧರ್ಮಬುದ್ಧಿಗೆದುಷ್ಟಬುದ್ಧಿಯುಯಾವ ಸಲಹೆಯಿತ್ತನು?
21. ದುಷ್ಟಬುದ್ಧಿಯುತನ್ನತಂದೆಗೆಏಕಾಂತದಲ್ಲಿಏನೆಂದು ಹೇಳಿದನು?
22. ಹಸುರು ಸಕಲೇಂದ್ರಿಯವನ್ನು ವ್ಯಾಪಿಸಿದೆ ಎಂಬುದನ್ನು ಕುವೆಂಪು ಹೇಗೆ ವರ್ಣಿಸಿದ್ದಾರೆ?

23. ಪಾರ್ಥಭೀಮರ ಬಗೆಗೆ ದುರ್ಯೋಧನನಅಭಿಪ್ರಾಯವೇನು?
24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರಅಭಿಪ್ರಾಯವೇನು?
25. ಪ್ರಕೃತಿಯ ಸಂಭ್ರಮ ವಸಂತ ಮುಖ ತೋರಲಿಲ್ಲ ಕವನದಲ್ಲಿ ಹೇಗೆ ವ್ಯಕ್ತವಾಗಿದೆ?
26. ಭಗತ್‌ಸಿಂಗ್‌ನ ಸಹಚರರುಯಾರು? ಅವರು ಹೇಗೆ ಅಮರರಾದರು?
27. ತಾವರೆ ಬೇರು ಮತ್ತುಗರಿಕೆಯ ಬಗೆಗಿನ ಒಗಟುಗಳನ್ನು ಸಮರ್ಥಿಸಿ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿಟಿಪ್ಪಣಿ ಬರೆಯಿರಿ.**

28. "ವಿ.ಕೃ.ಗೋಕಾಕ" **2 × 3 = 6**
29. "ಕುವೆಂಪು"

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 × 3 = 3**

30. ಭೇದವಿಲ್ಲೆಲೆಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 × 3 = 3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆರೋಗವಿಲ್ಲ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 × 3 = 3**

32. * ಕಟ್ಟುವುದುಕಠಿಣ; ಕೆಡಹುವುದು ಸುಲಭ

**ಅಥವಾ**

* ಜನನಿ ಮತ್ತುಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 × 3 = 18**

33. "ಪುಟಿಯುವಚೈತನ್ಯ, ನಾಳೆ ಮಾಡುವುದನ್ನುಇಂದೇ ಮಾಡು"
34. "ಅವರಿಗೆಅವರವರ ಪ್ರಜ್ಞೆಯೇದೇವರಾಗಿತ್ತು"
35. "ಹುಲಿ ಈಗ ಎಷ್ಟು ಹಸಿದಿರಬೇಕು"
36. "ಹೊಸ ಭರವಸೆಗಳ ಕಟ್ಟೋಣ"
37. "ನೆಲಕಿಱುವೆನೆಂದು ಬಗೆದಿರೆ ಚಲಕಿಱುವೆಂ"
38. "ಅರಸುಗಳ ವಾಜಿಯಂ ಬಿಡು"

**ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 × 4 = 4**

39. ನೀಲಮೇಘ ಮಂಡಲ__________
____________________
____________________
____________________
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗಯುಗಗಳ__________
____________________
____________________
____________________
ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**

40. ಮಾರಿಗೌತಣವಾಯ್ತು ನಾಳಿನ
ಭಾರತವುಚತುರಂಗ ಬಲದಲಿ
ಕೌರವನಋುಣಹಿಂಗೆರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 × 4 = 8**

41. * ಶಬರಿಯಚಿಂತೆ ಹಿಂಗಿ ಹೋದ ಸಂದರ್ಭವನ್ನು ವಿವರಿಸಿ.

**ಅಥವಾ**

* ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

42. * ಹಲಗಲಿಯ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

* ಹಲಗಲಿ ದಂಗೆಯ ಪರಿಣಾಮವೇನು?

**ಕೊಟ್ಟಿರುವಗದ್ಯಭಾಗವನ್ನುಓದಿಕೊಂಡು. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01×04 =04 (2+2)**

43. ಪ್ರಸ್ತುತ ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ನಮ್ಮಜನರು ಹೇಳುವುದು, "ನಾಗರಿಕತೆ ಬೆಳೆಯುತ್ತಾ ಮನುಷ್ಯತನ್ನ ಮಾನವೀಯ ಗುಣಗಳನ್ನು ಗಾಳಿಗೆ ತೂರುತ್ತಿದ್ದಾನೆ. ಭಾವನೆಗಳು ನಶಿಸುತ್ತಿವೆ. ಕರ್ತವ್ಯವನ್ನು ಮರೆದುಯಾಂತ್ರಿಕಜೀವನ ನಡೆಸುತ್ತಿದ್ದಾನೆ. ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿದೆ" ಎಂದು. ಆದರೆ ನಮ್ಮ ಸುತ್ತಲೂ ನಡೆಯುವ ಸಂಗತಿಗಳನ್ನು ಗಮನಿಸಿದಾಗ ಮಾತ್ರ ನಮಗೆ ಸತ್ಯದಅರಿವಾಗುತ್ತದೆ. ಆದರೆ ವೈಚಾರಿಕದೃಷ್ಟಿಯಿಂದ ವಿಶ್ಲೇಷಿಸಿ ನೋಡಿದಾಗ 'ಯಾವ ಮಾನವೀಯ ಮೌಲ್ಯಗಳೂ ಕಳೆದುಹೋಗಿಲ್ಲ. ಅದನ್ನು ನೋಡಲು ಬೇಕಾದದೃಷ್ಟಿ ನಮಲ್ಲಿಇಲ್ಲ. ಮಕ್ಕಳು ತಮ್ಮತಂದೆತಾಯಿಯನ್ನುಆಶ್ರಮಕ್ಕೆ ಬಿಡುತ್ತಾರೆ. ಇದು ಸಂಬಂಧಗಳು ಕಳಚುವುದಕ್ಕೆ ಉದಾಹರಣೆಯಾಗುವುದಾದರೆ ನಮ್ಮ ಸಮಾಜದಲ್ಲಿ ನೊಂದತಂದೆ ತಾಯಿಗಳಿಗಾಗಿ ವೃದ್ಧಾಶ್ರಮ ನಡೆಸುವವರಲ್ಲಿ ಮಾನವೀಯತೆಕಾಣುವುದಿಲ್ಲವೆ?' ಎಂಬುದುಅರಿವಾಗುತ್ತದೆ. ದ್ರಾಕ್ಷಿ ಸಿಗದ ನರಿ ಹಣ್ಣು ಹುಳಿಯೆಂದ ಹಾಗೆ, ಮನದಕಣ್ಣುತೆರೆಯದೆ ನಾಗರೀಕತೆಯನ್ನುದೂಷಿಸುವ ನಮ್ಮ ನಿಲುವು ಬದಲಾಗಬೇಕಿದೆ. ಮಾನವೀಯ ಮೌಲ್ಯಗಳನ್ನು ಜೀವಂತವಾಗಿಡುವಲ್ಲಿ ನಮ್ಮ ಪಾತ್ರದೊಡ್ಡದಾಗಿದೆ. ಅದನ್ನರಿತು ನಾವು ಸುಂದರಕುಟುಂಬ, ಸಮಾಜ, ನಾಡು, ದೇಶಕಟ್ಟುವಲ್ಲಿ ಪ್ರಯತ್ನಿಸಬೇಕಿದೆ.

**ಪ್ರಶ್ನೆಗಳು :**

43) ಅ.ಮಾನವೀಯತೆಯ ಬಗ್ಗೆ ಜನರು ಹೇಳುವ ಮಾತುಗಳೇನು?

43) ಆ. ಮಾನವೀಯತೆಯ ಬಗ್ಗೆ ವೈಚಾರಿಕದೃಷ್ಟಿಯಿಂದ ವಿಶ್ಲೇಷಿಸಿದಾಗ ಯಾವಯಾವ ಅಂಶಗಳು ಅರಿವಾಗುತ್ತವೆ?

44. ನಿಮ್ಮನ್ನು ಹಾಸನ ಜಿಲ್ಲೆಯಆಲೂರಿನ ಸರ್ಕಾರಿ ಪ್ರೌಢಶಾಲೆಯರೂಪಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ಮೈಸೂರಿನ ಕುವೆಂಪು ಬಡಾವಣೆಯ ನಿಮ್ಮತಾಯಿಗೆ ಪತ್ರ ಬರೆಯಿರಿ. **1 × 5 = 5**

**ಅಥವಾ**

ನಿಮ್ಮ ಶಾಲೆಯಲ್ಲಿ ಆಚರಿಸಿದ ಸಂವಿಧಾನ ದಿನದಆಚರಣೆಯ ವರದಿಯನ್ನು ಪ್ರಕಟಿಸುವಂತೆಕೋರಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆಒಂದು ಮನವಿ ಪತ್ರ ಬರೆಯಿರಿ:

45. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೊಂದು ವಿಷಯಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ:**

**1 × 5 = 5**

* ತ್ಯಾಜ್ಯ ವಸ್ತು ನಿರ್ವಹಣೆ

**ಅಥವಾ**

* ವಿದ್ಯಾಗಮ ಕಾರ್ಯಕ್ರಮದ ಅನುಕೂಲತೆಗಳು